**ವಸುಮತಿ ಉಡುಪ**

ಕಲೆ: ಮುರಳೀಧರ ರಾಠೋಡ್

# ನಂಜಾಗಿ ಕಾಡಿತ್ತು ಮಾತು



"ಕತ್ಲೇಲಿ ಕೂತ್ಗಂಡು ತಪಸ್ಸು ಮಾಡ್ತಿದೀರೇನ್ರೀ? ಊಟ ಮಾಡೋ ಯೋಚ್ನೆ ಉಂಟಾ, ಇಲ್ವಾ?"

ಮುಂಚೇಕಡೆಯ ಮೆಟ್ಟಿಲ ಮೇಲೆ ಕೂತಿದ್ದ ನಾಗರಾಜ ಹಿಂಬದಿಯಿಂದ ಅನಿರೀಕ್ಷಿತವಾಗಿ ಕೇಳಿ ಬಂದ ಸೀತೆಯ ಮಾತಿನಿಂದ ಕುಮುಟಿ ಬಿದ್ದ. "ಕರೆಂಟು ಬಂತಾ?" ಕೇಳಿದ.

"ಕರೆಂಟು ಬಂದಿದ್ರೆ ಲೈಟ್ ಹಾಕ್ತಿರ್ಲಿಲ್ವಾ? ಕರೆಂಟೂ ಇಲ್ಲ, ಗಿರೆಂಟೂ ಇಲ್ಲ. ಬನ್ನಿ ಊಟಕ್ಕೆ..."

"ಯಾಕೋ ಬ್ಯಾಡ ಅನ್ನಿಸ್ತಿದೆ ಕಣೇ, ಹಸಿವಿಲ್ಲ. ನೀವೆಲ್ಲಾ ಊಟ ಮಾಡಿ ಮಲಕ್ಕೊಂಬಿಡಿ."

"ಇದೊಳ್ಳೇ ಪಂಚಾತ್ಕೆ ಆಯ್ತಲ್ಲ. ಬೆಳಗಿಂದ ನೋಡ್ತಿದೀನಿ, ಕೂತ್ರೆ ಕೂತಲ್ಲೇ, ನಿಂತ್ರೆ ನಿಂತಲ್ಲೇ..."

ನಾಗರಾಜ ಉದ್ದಕ್ಕೆ ಉಸಿರು ಬಿಟ್ಟ.

"ಬೇಜಾರಾಗಲ್ವಾ, ನೀನೇ ಹೇಳು..." ಅಂದ.

"ಬೇಜಾರಾಗುತ್ತೆ ಕಣ್ರೀ. ಯಾರು ಇಲ್ಲ ಅಂದೋರು? ಸಣ್ಣಕ್ಕಿದ್ದಾಗಿಂದ ಒಟ್ಟಿಗೆ ಆಡಿ ಬೆಳೆದೋರು. ಎಷ್ಟೇ ದೂರ ಆಗಿದೀವಿ ಅಂದ್ಕೊಂಡಿದ್ರೂ ಒಳಗೊಳಗೆ ಕರುಳುಬಳ್ಳಿ ಪಾಶ ಇದ್ದೇ ಇರುತ್ತೆ."

"ಮತ್ತೆ? ಒಂದು ಮಾತು ನನ್ನ ಕಿವಿಗೆ ಹಾಕ್ಬಾರ್ದಿತ್ತಾ? ಕೊನೇದಾಗಿ ಮಕ ನೋಡ್ಕಂಡು ಬರ್ತಿದ್ನಾ? ಚಿಕ್ಕಪ್ಪನ ಮಗಳು. ವರಸೇಲಿ ತಂಗಿ. ಯಾರೋ ಮೂರನೆಯೋರು ಸುದ್ದಿ ಕಿವಿಗೆ ಹಾಕ್ಬೇಕಾಯ್ತು. ಇಷ್ಟು ಹಟ ಸಾಧಿಸೋಕೆ ನಾನೇನು ಅವರ ಗಂಟು ತಿಂದಿದ್ನಾ? ತಪ್ಪಾಗಿದೆ ಹೌದು, ಆದ್ರೂ..." ನಾಗರಾಜನ ಗಂಟಲು ಬಿಗಿಯಿತು. ಕಣ್ಣು ಹನಿಯಿತು.

"ಆಗಿದ್ದು ಆಗಿಹೋಯ್ತಲ್ಲ? ಅದನ್ನೇ ಜಗೀತಾ ಕೂತ್ಗಂಡ್ರೆ ಬದುಕು ಮಾಡೋಕಾಗುತ್ತಾ? ಆಯ್ತಲ್ಲ, ಬಿಟ್ಬಿಡಿ. ಏಳಿ ಊಟಕ್ಕೆ. ಮಕ್ಕಳು ಕಾದ್ಕಂಡಿದಾವೆ..."

"ಹಶುವಿಲ್ಲ ಅಂದ್ನಲ್ಲ..."

"ಹಂಗಾರೆ ಇವತ್ತು ನಂಗೂ ಏಕಾದಶಿ. ನಿಮಗೆ ಹಶುವಿಲ್ದಿದ್ರೆ ನಂಗೂ ಇಲ್ಲ."